+ ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರು, ಮತ್ತೆ ಯಡಿಯೂರಪ್ಪನವರು, ವಾಟಾಳ್ ನಾಗರಾಜ್ ರವರು, ಬೈರೇಗೌಡರು, ಜಾಲಪ್ಪನವರು ಸಿಂಧ್ಯಾರವರು ಈ ವಿಷಯದ ಬಗ್ಗೆ ಬಹಳ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಶ್ರೀನಿವಾಸಪುರದಲ್ಲಿ ಈ ಘಟನೆ ನಡೆದಿದೆ ಎನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ನಾನು ನೇರವಾಗಿ ಸಂಬಂಧಪಟ್ಟಂಥ ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಕೂಡ ಮಾಡಿದ್ದೇನೆ. ನಿನ್ನೆ ಕೂಡ ಮಾನ್ಯ ನಾಣಯ್ಯನವರು ಮತ್ತು ಸುದರ್ಶನ್‌ರವರು ಮೇಲ್ಮನೆಯಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದರು. ಆಗಲೂ ಕೂಡ ನಾನು ಹೇಳಿದೆ, ಉತ್ತರ ಕೊಡುವುದಕ್ಕಿಂತ ಮುಂಚೆ ಅಲ್ಲಿ ಏನು ಘಟನೆ ನಡೆದಿದೆ, ಪ್ರಾಮಾಣಿಕವಾಗಿ ಅದರ ಬಗ್ಗೆ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ ಮತ್ತು ಹಿರಿಯ ಅಧಿಕಾರಿಗಳನ್ನು ಆ ಸ್ಥಳಕ್ಕೆ ಕಳುಹಿಸಿಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದರಂತೆ ನಿನ್ನೆ ಕೂಡ ಡಿ.ಐ.ಬಿ. ಅವರನ್ನು ಕಳುಹಿಸಿಕೊಟ್ಟಿದ್ದೇನೆ. ಅವರಿಂದ ವರ್ತಮಾನ ಕೂಡ ಬಂದಿದೆ. ತಾವು ಹೇಳತಕ್ಕಂಥದ್ದರಲ್ಲಿ ತಪ್ಪಿದೆ ಎಂದು ನಾನು ಹೇಳುವುದಿಲ್ಲ. ತಾವು ಕೂಡಾ ವಿರೋಧ ಪಕ್ಷದ ನೇತಾರರುಗಳು ಇದ್ದೀರಿ, ಪ್ರತಿನಿಧಿಗಳು ಇದ್ದೀರಿ, ಮತ್ತು ಆ ಜಿಲ್ಲೆಯಿಂದ ಕೂಡಾ ಬಂದಿದ್ದೀರಿ. ಅಲ್ಲಿರತಕ್ಕಂಥ ವದಂತಿ ಕೂಡ ತಮಗೆ ಗೊತ್ತಿದೆ. ಅದರ ಬಗ್ಗೆ ನಾನು ಟೀಕೆಯನ್ನು ಮಾಡುತ್ತಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ರೈತರಿಗೆ ಇರತಕ್ಕಂಥ ಸಮಸ್ಯೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಮಾಡತಕ್ಕಂಥ ಹಕ್ಕು ಎಲ್ಲರಿಗೂ ಇದೆ. ಆದರೆ ಇದರಲ್ಲಿ ಕೂಡ ಒಂದು ನಿಯಮ ಇದೆ. ಅಲ್ಲಿ ಅವರು ಮೆರವಣಿಗೆ ಪ್ರವಾಸಿ ಮಂದಿರದಿಂದ ಹೊರಟು ತಹಶೀಲ್ದಾರ್ ಕಛೇರಿಗೆ ಹೋಗುವಾಗ ನಾವು ಎಲ್ಲಿಯೂ ಅವರನ್ನು ಅಡ್ಡಿಪಡಿಸಿಲ್ಲ. ಘೋಷಣೆಗಳನ್ನು ಕೂಗಿಕೊಂಡು ಸಮಸ್ಯೆಗಳನ್ನು ತಹಶೀಲ್ದಾರ್ ಕಛೇರಿಗೆ ಹೇಳುವುದಕ್ಕೆ ಹೊರಟಾಗ ನಾವು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೇವೆ. ಯಾರಿಗೂ ಕೂಡ ತೊಂದರೆಯನ್ನು ಮಾಡಿಲ್ಲ. ನಾನು ಇಲ್ಲಿ ಎರಡು ಭಾಗವನ್ನೂ ಹೇಳುತ್ತಿದ್ದೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಮೊದಲು ಕೆ.ಇ.ಬಿ.ಗೆ ಹೋಗಿದ್ದು, ಆಮೇಲೆ ತಹಶೀಲ್ದಾರ್ ಕಛೇರಿಗೆ ಹೋಗಿದ್ದುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಆ ಪೋಲೀಸ್ ಅಧಿಕಾರಿಗಳನ್ನು ಮನೆಗೆ ಕಳುಹಿಸಿದ್ದೀರಾ? ಅವರನ್ನು ಸಸ್ಪೆಂಡ್ ಮಾಡಿದ್ದೀರಾ? ರೈತರನ್ನು ಬೂಟ್ಸ್‌ನಲ್ಲಿ ಹೊಡೆದಿದ್ದಾರೆ, ಮುಖಂಡರುಗಳ ಮೇಲೆ ಹಲ್ಲೆಯನ್ನು ಮಾಡಿದ್ದಾರೆ. ಅವರ ಬಗ್ಗೆ ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ಅವರುಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ನಿಮ್ಮ ಉತ್ತರವನ್ನು ಕೇಳಿಕೊಂಡು, ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕೇ? 24 ಗಂಟೆಗಳೊಳಗಾಗಿ ಆ ಅಧಿಕಾರಿಗಳನ್ನು ತಾವು ಮನೆಗೆ ಕಳುಹಿಸಬೇಕಾಗಿತ್ತು. ಇದು ಒಂದು ರೈತ ವಿರೋಧ ಸರ್ಕಾರ. ನಾವು ಸಭಾತ್ಯಾಗ ಮಾಡಿ ಹೊರಗಡೆ ಹೋಗಬೇಕಾಗುತ್ತದೆ. ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಅವರು ನನಗೂ ಅವಕಾಶವನ್ನು ಕೊಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬನ್ನಿರಿ ಹೋಗೋಣ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಕನ್ನಡ ಪಕ್ಷ ಮತ್ತು ಸಮಾಜವಾದಿ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)